# ಹ್ಯುಗೋ ಮುನ್ಸ್ಟರ್ಬರ್ಗ್ (1863-1916): ಆನ್ವಯಿಕ ವಿಜ್ಞಾನಗಳ ಜನಕ

**ಇಂದಿರಾ ಜೈಪ್ರಕಾಶ್**



***

ಮನೋವಿಜ್ಞಾನದ ಅನೇಕ ಅನ್ವಯಿಕ (Applied Psychology) ಶಾಖೆಗಳಿಗೆ ಜನಕನೆನಿಸಿದವನು ಮುನ್ಸ್ಟರ್ಬರ್ಗ್ . ಇವನು ಕಲೆ ಮತ್ತು ಸಂಗಿತಪ್ರಿಯರಾಗಿದ್ದ ಶ್ರೀಮಂತ ಕುಟುಂಬದಲ್ಲಿ ಜರ್ಮನಿಯ ಡಾನ್ಜಿಗ್ ಎಂಬ ಪ್ರಾಂತದಲ್ಲಿ ಜನಿಸಿದ. ಮೂಲತಹ ಯಹೂದಿಯಾಗಿದ್ದರೂ ಧರ್ಮ ಅವನ ಅನನ್ಯತೆಯ ಭಾಗವಾಗಿರದೆ ತನ್ನನ್ನು ಜರ್ಮನ್ ಎಂದೇ ಗುರುತಿಸಿಕೊಂಡಿದ್ದ. ಲೆಪ್ಜಿಗ್‌ನಲ್ಲಿ ವುನ್ಡಟ್ ನ ಬಳಿ ಸಂಶೋಧನೆ ನಡೆಸಿದ್ದ. ನಂತರ ಹೈಡಲ್ಬರ್ಗ್ ವಿಶ್ವವಿದ್ಯಾಲಯದಲ್ಲಿ ವೈದ್ಯಕೀಯ ಪದವಿಯನ್ನೂ ಪಡೆದಿದ್ದ. ಫ್ರೈಬರ್ಗ್ ನಲ್ಲಿ ಮನೋವಿಜ್ಞಾನದ ಪ್ರಯೋಗಾಲಯ ಸ್ಥಾಪಿಸಿ ಅನೇಕ ವಿಷಯಗಳ ಅಧ್ಯಯನ ನಡೆಸಿದ್ದ. ವುನ್ಡಟ್ ನ ಕೆಲವು ವಿಚಾರಗಳ ಬಗ್ಗೆ ಇವನಿಗೆ ಭಿನ್ನಾಭಿಪ್ರಾಯವಿತ್ತು. ವುನ್ಡಟ್ ನ ಪ್ರಕಾರ ಮನೋವಿಜ್ಞಾನ ಒಂದು ಶುದ್ಧ ಅಧ್ಯಯನವಾಗಿದ್ದು ವ್ಯಾವಹಾರಿಕ ಸಮಸ್ಯೆಗಳಿಂದ ದೂರ ಇರಬೇಕು. ಮುನ್ಸ್ಟರ್ಬರ್ಗ್ ಪ್ರಕಾರ ಮನೋವಿಜ್ಞಾನದ ಮೂಲ ಗುರಿ ವಾಸ್ತವದ ಸಮಸ್ಯೆಗಳನ್ನು ಪರಿಹರಿಸುವುದು. ಫ್ರಾಯ್ಡನ ವಿಚಾರಗಳನ್ನೂ ಇವನು ಕಟುವಾಗಿಯೇ ಟೀಕಿಸುತ್ತಿದ್ದ.

ಇವನು ಬರೆದ 'ಆಕ್ಟಿವಿಟಿ ಆಫ್ ದಿ ವಿಲ್ (Activity of the Will)' ಎನ್ನುವ ಪುಸ್ತಕ ವುನ್ಡಟ್ ಮತ್ತು ಟಿಟ್ಚನರ್ ಅವರ ಟೀಕೆಗೆ ಗುರಿಯಾಯಿತು. ಆದರೆ ಅದನ್ನು ಮೆಚ್ಚಿದ ವಿಲಿಯಂ ಜೇಮ್ಸ್ ಇವನನ್ನು ಹಾರ್ವರ್ಡ್ಗೆ ಆಹ್ವಾನಿಸಿದ್ದ. 1892 ರಲ್ಲಿ ಹಾರ್ವರ್ಡ್ ಸೇರಿದವನು ಆಂಗ್ಲಭಾಷೆ ಕಲಿತು ಅಧ್ಯಾಪಕನಾಗಿ ಕೆಲಸ ಮಾಡಿದ. ಮೂರು ವರ್ಷಗಳ ನಂತರ ಫ್ರೈಬರ್ಗ್ಗೆ ಮರಳಿದವನಿಗೆ ಉತ್ತಮ ಕೆಲಸ ಸಿಗಲಿಲ್ಲ. ಹೀಗಾಗಿ ಮತ್ತೆ ಜೇಮ್ಸನನ್ನು ಸಂಪರ್ಕಿಸಿ ತಾನು ಬಿಟ್ಟಿದ್ದ ಕೆಲಸವನ್ನು ಮರಳಿ ಪಡೆದ. ನಂತರ 1897 ರಿಂದ ತನ್ನ ಮರಣದವರೆಗೂ ಅಮೆರಿಕೆಯಲ್ಲೇ ಕೆಲಸಮಾಡಿದ.

ನೈದಾನಿಕ, ಔದ್ಯೋಗಿಕ (Industrial Psychology), ಶೈಕ್ಷಣಿಕ, ಸಂಘಟನಾ ಮತ್ತು ಕಾನೂನು ಮನೋವಿಜ್ಞಾನಗಳ ಉಗಮಕ್ಕೆ ಇವನ ಕೊಡುಗೆ ಅಪಾರ.

ಮುನ್ಸ್ಟರ್ಬರ್ಗ್ 1909 ರಲ್ಲಿ 'ಸೈಕಾಲಜಿ ಅಂಡ್ ಮಾರ್ಕೆಟ್ (Psychology and Market)' ಎಂಬ ಲೇಖನ ಬರೆದಿದ್ದ. ಇದರಲ್ಲಿ ಮನೋವಿಜ್ಞಾನವನ್ನು ಜಾಹಿರಾತುಗಳು, ಸಿಬ್ಬಂದಿ ನಿರ್ವಹಣೆ, ಕೆಲಸಗಾರರನ್ನು ಪ್ರೇರೇಪಿಸುವುದು ಮತ್ತು ಅವರ ಕ್ಷಮತೆ ಉತ್ತಮಗೊಳಿಸುವುದಕ್ಕೆ ಬಳಸಬಹುದು ಎಂದು ತಿಳಿಸಿದ್ದ. 1913 ರಲ್ಲಿ 'ಸೈಕಾಲಜಿ ಅಂಡ್ ಇಂಡಸ್ಟ್ರಿಯಲ್ ಎಫಿಸಿಯೆನ್ಸಿ (Psychology and Industrial efficiency)' ಎಂಬ ಪುಸ್ತಕದಲ್ಲಿ ಒಂದು ಕೆಲಸಕ್ಕೆ ಸೂಕ್ತವಾಗುವಂತಹ ವ್ಯಕ್ತಿತ್ವ ಇರುವವರನ್ನು ಆರಿಸಬೇಕು ಎಂದು ಪ್ರಸ್ತಾಪಿಸಿ ಆಧುನಿಕ ಔದ್ಯೋಗಿಕ ಮನೋವಿಜ್ಞಾನಕ್ಕೆ ನಾಂದಿ ಹಾಡಿದ. ವೃತ್ತಿಮಾರ್ಗದರ್ಶನದಿಂದ 'ಕೆಲಸ-ವ್ಯಕ್ತಿ' ಗಳ ನಡುವೆ ಹೊಂದಾಣಿಕೆ ಸಾಧಿಸಿ ಉತ್ಪನ್ನ ಹೆಚ್ಚಿಸಬಹುದು ಎಂದು ಸಾರಿದ. 1908 ರಲ್ಲಿ 'ಆನ್ ದಿ ವಿಟ್ನೆಸ್ ಸ್ಟಾಂಡ್ (On the Witness Stand)' ಎಂಬ ಕೃತಿಯಲ್ಲಿ ಮನೋವೈಜ್ಞಾನಿಕ ಕಾರಕಗಳು ಹೇಗೆ ಸಾಕ್ಷಿ ಹೇಳುವುದು, ವಿಚಾರಣೆ ಮಾಡುವುದು, ತಪ್ಪೊಪ್ಪಿಗೆ ಮುಂತಾದವನ್ನು ಪ್ರಭಾವಿಸುತ್ತವೆ ಎಂದು ತೋರಿಸಿಕೊಟ್ಟಿದ್ದ. ಇದು ಫೊರೆನ್ಸಿಕ್ ಮನೋವಿಜ್ಞಾನಕ್ಕೆ (Forensic Psychology) ಬುನಾದಿಯಾಯಿತು. ಮಾನಸಿಕ ರೋಗಗಳಲ್ಲಿ ಆಸಕ್ತಿಹೊಂದಿದ್ದು ತನ್ನ ಪ್ರಯೋಗಶಾಲೆಗೆ ಬಂದ ರೊಗಿಗಳಿಗೆ ಚಿಕಿತ್ಸೆ ನೀಡುತ್ತಿದ್ದ. ಇಂತಹ ವರದಿಗಳನ್ನು 1909 ರಲ್ಲಿ 'ಸೈಕೋಥೆರಪಿ (Psychotherapy)' ಎಂಬ ಪುಸ್ತಕದಲ್ಲಿ ಪ್ರಕಾಶಿಸಿದ. ಇವನು ಪರಾಮಾನಸಶಾಸ್ತ್ರವನ್ನು (Para Psychology) ವಿರೋಧಿಸುತ್ತಿದ್ದ. ಆತ್ಮದ ಜೊತೆ ಸಂಪರ್ಕ ಸಾಧಿಸುತ್ತೇನೆಂದು ಜನರನ್ನು ನಂಬಿಸಿದ್ದ ನಕಲಿ ಸ್ಪಿರಿಚುಯಲಿಸ್ಟ್ (Spiritualist) ಯುಸೊಪಿಯಾ ಪಲಾಡಿಯೋಳನ್ನು ಪರೀಕ್ಷಿಸಿ ಅವಳ ಮೋಸ ಬಯಲಿಗೆಳದಿದ್ದ. ಹೀಗೆ ಅನೇಕ ಹೊಸ ಶಾಖೆಗಳಿಗೆ ಪ್ರೇರಕನಾದವನು ಇವನು.

ಹಾರ್ವರ್ಡ್ನಲ್ಲಿ ಮುನ್ಸ್ಟರ್ಬರ್ಗ್ ನ ವೃತ್ತಿ ಜೀವನ ಚೆನ್ನಾಗಿ ನಡೆಯುತ್ತಿತ್ತು. ಅಂದಿನ ಅಮೆರಿಕೆಯ ಅಧ್ಯಕ್ಷ ಈತನಿಗೆ ಅನೇಕ ಸಮಿತಿಗಳಲ್ಲಿ ಪ್ರಮುಖ ಸ್ಥಾನ ನೀಡಿದ್ದ. ಇವನಿಗೆ ಜರ್ಮನಿಯ ಬಗ್ಗೆ ಬಹಳ ಅಭಿಮಾನವಿತ್ತು. ಇದೇ ಮುಂದೆ ಅವನಿಗೆ ಮುಳುವಾಯಿತು. ಅನೇಕ ವಿದ್ವತ್ ಸಂಸ್ಥೆಗಳಲ್ಲಿದ್ದು ಜರ್ಮನಿ ಮತ್ತು ಅಮೆರಿಕೆಯ ನಡುವೆ ಉತ್ತಮ ಬಾಂಧವ್ಯ ಬೆಳೆಸಲು ಪ್ರಯತ್ನಿಸುತ್ತಿದ್ದ. ಆದರೆ ಪ್ರಥಮ ವಿಶ್ವಸಮರ ಇವನನ್ನು ವಿವಾದಕ್ಕೆ ತಳ್ಳಿತ್ತು. ತಾಯ್ನಾಡಾದ ಜರ್ಮನಿಯ ಬಗ್ಗೆ ಇವನ ನಿಷ್ಠೆ ಅಚಲವಾಗಿದ್ದು ಅವನು ಜರ್ಮನಿಯ ಯುದ್ಧಾಕಾಂಕ್ಷೆಯನ್ನು ಸಮರ್ಥಿಸುತ್ತಿದ್ದ. ಇದು ಅಮೆರಿಕನ್ನರನ್ನು ಕೆರಳಿಸಿ ಅವನ ಸಹೋದ್ಯೋಗಿಗಳೂ ಅವನಿಂದ ದೂರವಾಗತೊಡಗಿದರು. ಜರ್ಮನರು ಬಹಳ ದಕ್ಷರು, ಅಮೆರಿಕನ್ನರು ಚಂಚಲಚಿತ್ತರು ಎಂದು ಮುಕ್ತವಾಗಿಯೇ ಸಾರುತ್ತಿದ್ದ. ಇಂತಹ ಟೀಕೆಗಳು ಅವನ ಬಗ್ಗೆ ಜನರಲ್ಲಿ ಅಸಮಾಧಾನ ಮೂಡಿಸಿತ್ತು. ಇವನು ಜರ್ಮನಿಯ ಪರ ಗೂಢಚರ್ಯೆ ಮಾಡುತ್ತಿರಬಹುದು ಎಂಬ ಶಂಕೆಯೂ ಹುಟ್ಟಿತ್ತು. ಮಹಿಳೆಯರು ಅವರ ದೈಹಿಕ ನಿಶ್ಶಕ್ತಿಯ ಕಾರಣ ಉಚ್ಚಶಿಕ್ಷಣ ಮತ್ತು ಜ್ಯೂರಿ ಕಾರ್ಯಕ್ಕೆ ಸೂಕ್ತರಲ್ಲ, ಮದ್ಯಪಾನ ನಿಷೇಧ ವಿರೋಧಿಸಿದರೆ ಜರ್ಮನ್ ಮತ್ತು ಅಮೆರಿಕೆಯ ಮದ್ಯ ತಯಾರಕರಿಗೆ ನಷ್ಟವಾಗುತ್ತದೆ ಎಂದು ವಾದಿಸಿ ವಿವಾದಕ್ಕೆ ಒಳಗಾಗಿದ್ದ.

ಮುನ್ಸ್ಟರ್ಬರ್ಗ್ ಅಮೆರಿಕೆಯಲ್ಲಿದ್ದುಕೊಂಡು ಜರ್ಮನಿಯನ್ನೂ ಸಮರ್ಥಿಸುವ ಸಂಧಿಗ್ದತೆಗೆ ಸಿಲುಕಿದ್ದ. 1916ರಲ್ಲಿ ಉಪನ್ಯಾಸ ನೀಡಲು ಹೋಗಿದ್ದವನು ಮಿದುಳಿನ ರಕ್ತಸ್ರಾವ (brain haemorrhage) ದಿಂದ ಸಾವನ್ನಪ್ಪಿದ್ದ. ಆ ವೇಳೆಗೆ ಅವನ ಜರ್ಮನ್ -ಪರ ನಿಲುವಿನಿಂದ 'ಅಮೆರಿಕೆ ಅತಿಯಾಗಿ ದ್ವೇಷಿಸುವ' ಮನೋವಿಜ್ಞಾನಿಯಾಗಿದ್ದ. ಅವನ ಸಾವಿನ

ಸುದ್ದಿ ವೃತ್ತಿಜಗತ್ತಿನಲ್ಲಿ ಯಾವ ಸಂಚಲನವನ್ನೂ ಉಂಟುಮಾಡಲಿಲ್ಲ. ಮನೋವಿಜ್ಞಾನದ ಪಠ್ಯಪುಸ್ತಕಗಳಲ್ಲೂ ಅವನನ್ನು ನಿರ್ಲಕ್ಷ್ಯ ಮಾಡಲಾಗುತ್ತಿತ್ತು. ಆದರೂ ಅವನ ಸಂಶೋಧನೆ, ಅಧ್ಯಯನಗಳು ಮನೋವಿಜ್ಞಾನದ ಮುನ್ನಡೆಗೆ ಕಾರಣವಾಗಿದ್ದು ನಿರ್ವಿವಾದ.

***